# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 757
ಸದಸ್ಯರ ಹೆಸರು : ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 25-09-2020.
ಉತ್ತರಿಸುವ ಸಚಿವರು : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಚಿವರು

| ಕ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಚಿತ್ರದುರ್ಗಿ ಶ್ರೀ ವಿಜಯ ಮಹಂತೇಶ ಸಂಸ್ಥಾನದ ಮಠಾಧಿಪತಿ ಲಿಂ.ಶ್ರೀ ಮ.ನಿ.ಪ್ರ. ಡಾ:ಮಹಂತ ಸ್ವಾಮಿಗಳವರ ಹುಟ್ಟು ಹಬ್ಬವನ್ನು 2018ನೇ ಸಾಲಿನಲ್ಲಿ ರೂ.69.00 ಲಕ್ಷಗಳ ಅನುದಾನ ಬಿಡುಗಡೆಯೊಂದಿಗೆ ಆಚರಣೆ ಮಾಡಲು ಆದೇಶವಾಗಿದ್ದರೂ ಸಹ 2019-20ನೇ ಸಾಲಿನಿಂದ ಆಚರಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರಿ ಆದೇಶ ಸಂಖ್ಯೆ:ಆಕುಕ 70 ಪಿಬಿಎಂ 2017, ದಿ:19.07.2017 ರಲ್ಲಿ ಶ್ರೀ ಮ.ನಿ.ಪ್ರಡಾ. ಮಹಂತಸ್ವಾಮಿಗಳ ಜನ್ಮದಿನವಾದ ಅಗಸ್ಟ್ 01 ರಂದು ರಾಜ್ಯಾದ್ಯಂತ ವ್ಯಸನಮುಕ್ತ ದಿನಾಚರಣೆಯನ್ನಾಗಿ ಆಚರಿಸಲು ಸರ್ಕಾರವು ಅನುಮತಿಸಿ ಆದೇಶ ಹೊರಡಿಸಿದೆ.<br><br>ಸರ್ಕಾರದ ಆದೇಶ ಸಂಖ್ಯೆ : ಕ ಸಂ ವಾ 271 ಕಸಧ 2018 , ದಿನಾಂಕ: 30.07.2018 ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಪ್ರತಿ ವರ್ಷ ಆಗಸ್ಟ್ 01 ನೇ ತಾರೀಖಿನಂದು 'ವ್ಯಸನ ಮುಕ್ತ ದಿನಾಚರಣೆಯನ್ನು' ಕೇಂದ್ರ, ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಆಚರಿಸುವಂತೆ ಸರ್ಕಾರಿ ಆದೇಶವಾಗಿರುತ್ತದೆ. ಇದಕ್ಕೆ ತಗಲುವ ಒಟ್ಟು ವೆಚ್ಚ ರೂ.69.00 ಲಕ್ಷ (ರೂಪಾಯಿ ಅರವತ್ತೊಂಭತ್ತು ಲಕ್ಷ ಮಾತ್ರ)ಗಳನ್ನು ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಮುಖಾಂತರ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರಿಗೆ ಬಿಡುಗಡೆ ಮಾಡಲು ಕ್ರಿಯಾಯೋಜನೆಯಲ್ಲಿ ಅನುದಾನವನ್ನು ಕಾಯ್ದಿರಿಸಲಾಗಿತ್ತು.<br><br>ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಗೆ ಹಣ ಬಿಡುಗಡೆ ಸಂಬಂಧ ಕೆ2 ಡಿಡಿಓ ಸಂಖ್ಯೆ ನೀಡುವಂತೆ ಹಾಗೂ ಪ್ರತಿ ವರ್ಷ ಆಗಸ್ಟ್ 01 ನೇ ತಾರೀಖಿನಂದು "ವ್ಯಸನ ಮುಕ್ತ ದಿನಾಚರಣೆಯನ್ನು " ಆಚರಿಸಲು ತುರ್ತು ಕ್ರಮ ವಹಿಸುವಂತೆ ತಿಳಿಸಿ ದಿನಾಂಕ:31.07.2018 ಮತ್ತು ದಿ:15.06.2019ರ ರಂದು ಪತ್ರ ಬರೆಯಲಾಗಿರುತ್ತದೆ. ಆದರ ಸದರಿ ಇಲಾಖೆಯಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ.<br><br>ಸರ್ಕಾರದ ಪತ್ರ ಸಂಖ್ಯೆ:ಕಸಂವಾ 71 ಕಸಧ 2019, ದಿ:18.09.2019ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ಸದರಿ ದಿನಾಚರಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಲೇ ಆಚರಿಸುವುದು ಸೂಕ್ತವಾಗಿರುತ್ತದೆ ಎಂದು ಸರ್ಕಾರಕ್ಕೆ ಪತ್ರ ಬರೆದಿದ್ದು, ಈ ಬಗ್ಗೆ ಪರಿಶೀಲಿಸಿ ಸರ್ಕಾರಕ್ಕೆ ವರದಿ ಮಾಡುವಂತೆ ಸೂಚಿಸಲಾಗಿರುತ್ತದೆ.<br><br>ಇಲಾಖೆಯ ಪತ್ರ ದಿ:17.01.2020ರಲ್ಲಿ ಸದರಿ ದಿನಾಚರಣೆಯನ್ನು ಶಿಕ್ಷಣ ಇಲಾಖೆಯ ವತಿಯಿಂದ ಆಚರಿಸುವ ಬಗ್ಗೆ ಆದೇಶ ಹೊರಡಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ. |

| | | |
|---|---|---|
| | | ಸರ್ಕಾರದ ಪತ್ರ ಸಂಖ್ಯೆ:ಕಸಂವಾ 124 ಕಸಧ 2020, ದಿ:21.08.2020ರಲ್ಲಿ ಶಿಕ್ಷಣ ಇಲಾಖೆಯು ಸದರಿ ದಿನಾಚರಣೆಯನ್ನು ಆಚರಿಸುವ ಕುರಿತಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ತೀರ್ಮಾನ ಕೈಗೊಳ್ಳುವ ವಿಷಯವಾದ್ದರಿಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಂತದಲ್ಲಿಯೇ ತೀರ್ಮಾನ ಕೈಗೊಳ್ಳುವಂತೆ ತಿಳಿಸಿರುವ ಪತ್ರವನ್ನು ಇಲಾಖೆಗೆ ಕಳುಹಿಸಿ ಈ ಬಗ್ಗೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿರುತ್ತಾರೆ. ಇಲಾಖೆಯಿಂದ ಪ್ರತಿ ವರ್ಷ ಆಗಸ್ಟ್ 01 ರಂದು ಸದರಿ ಜಯಂತಿಯನ್ನು ಆಚರಿಸಲು ಆದೇಶ ಹೊರಡಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |
| (ಆ) | ಬಂದಿದ್ದಲ್ಲಿ, ಕಳೆದ ಎರಡು ವರ್ಷಗಳಿಂದ ಆಚರಣೆ ಮಾಡದೆ ಇರಲು ಕಾರಣಗಳೇನು; ಈ ಬಗ್ಗೆ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ. | ಆರೋಗ್ಯ-ಮತ್ತು-ಕುಟುಂಬ-ಕಲ್ಯಾಣ-ಇಲಾಖೆ-ವತಿಯಿಂದ ಈಗಾಗಲೇ 'ವಿಶ್ವ ವ್ಯಸನಮುಕ್ತ ದಿನಾಚರಣೆ' ಆಚರಿಸಲಾಗುತ್ತಿದ್ದು, ಸದರಿ ದಿನಾಚರಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆಚರಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.<br>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಮಾಜಿ ಶಿಕ್ಷಣ ಸಚಿವರಾದ ಶ್ರೀ ಬಸವರಾಜ ಹೊರಟ್ಟಿರವರು ಶಾಲಾ ಕಾಲೇಜುಗಳಲ್ಲಿ ಮಹಾಂತ ಸ್ವಾಮಿಗಳ ಜನ್ಮದಿನವಾದ ಆಗಸ್ಟ್ 01 ರಂದು 'ವ್ಯಸನ ಮುಕ್ತ ದಿನಾಚರಣೆಯನ್ನು' ಆಚರಿಸಿದರೆ ಯುವ ಸಮುದಾಯಕ್ಕೆ ಸಮಾಜದಲ್ಲಿನ ಮೂಢನಂಬಿಕೆಗಳು, ಸಾಮಾಜಿಕ ಅನಿಷ್ಟ ಪದ್ಧತಿಗಳು ಹಾಗೂ ದುಶ್ಚಟಗಳ ಕುರಿತು ಅರಿವು ಮೂಡಿಸಿದಂತಾಗುತ್ತದೆ ಆದುದರಿಂದ ಶಿಕ್ಷಣ ಇಲಾಖೆ ವತಿಯಿಂದ ಆಚರಿಸಲು ಸರ್ಕಾರಿ ಆದೇಶವನ್ನು ಮಾರ್ಪಡಿಸಿ ಅನುದಾನ ಬಿಡುಗಡೆ ಮಾಡುವುದು ಅಗತ್ಯವಿದೆಯೆಂದು ಕಾರ್ಯದರ್ಶಿಗಳಿಗೆ ಪತ್ರ ಬರೆದ ಹಿನ್ನಲೆಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು ಆದರೆ ಶಿಕ್ಷಣ ಇಲಾಖೆಯು ಸದರಿ ವಿಷಯವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ತೀರ್ಮಾನ ಕೈಗೊಳ್ಳುವ ವಿಷಯವಾದ್ದರಿಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಂತದಲ್ಲಿಯೇ ತೀರ್ಮಾನ ಕೈಗೊಳ್ಳುವಂತೆ ತಿಳಿಸಿರುತ್ತಾರೆ.<br>ಈ ಮೇಲ್ಕಂಡ ವಿಷಯಗಳ ಬಗ್ಗೆ ಪತ್ರ ವ್ಯವಹಾರ ನಡೆಯುತ್ತಿರುವ ಹಿನ್ನಲೆಯಲ್ಲಿ ಸದರಿ ದಿನಾಚರಣೆಯನ್ನು ಆಚರಿಸುವುದು ಸಾಧ್ಯವಾಗಿರುವುದಿಲ್ಲ. |
| (ಇ) | 2021ನೇ ಸಾಲಿನಿಂದ ಪ್ರತಿ ವರ್ಷ ಈ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ; (ಸಂಪೂರ್ಣ ವರದಿ ನೀಡುವುದು) | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರತಿ ವರ್ಷ ಆಗಸ್ಟ್ 01ರಂದು ಸದರಿ ಜಯಂತಿಯನ್ನು ಆಚರಿಸಲು ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಕಸಂವಾ 82 ಕವಿಸ 2020

**(ಸಿ.ಟಿ.ರವಿ)**
ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ,
ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಚಿವರು.